ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ಹಾಗೂ ಕಂದಾಯ ಸಚಿವರು):

ಅ) 1990-91 ಬಿಡುಗಡೆ

ರೂ. 225.792 ಲಕ್ಷ ಪೂರ್ಣ ಹಣ ಬಿಡುಗಡೆ ಮಾಡಲಾಗಿದೆ.

1991-92 ಬಿಡುಗಡೆ (ರೂ. ಲಕ್ಷಗಳಲ್ಲಿ)

ಕೇಂದ್ರ			ರಾಜ್ಯ		
ಬಿಡುಗಡೆ ಯಾಗ ಬೇಕಾದ್ದು	ಬಿಡುಗಡೆ ಯಾಗಿ ರುವುದು	ಬಾಕಿ	ಬಿಡುಗಡೆ ಯಾಗ ಬೇಕಾದ್ದು	ಬಿಡುಗಡೆ ಯಾಗಿ ರುವುದು	ಬಾಕಿ
106.220	55.859	50.361	106.220	79.665	26.555

ಕಡಿಮೆ ಹಣ ಬಿಡುಗಡೆಯಾಗಲು ಕಾರಣ

1. 1991-92ನೇ ಸಾಲಿನ ಮಂಜೂರಾದ ಆಯವ್ಯಯದಲ್ಲಿ ಶೇಕಡಾ 5 ರಷ್ಟು ಕಡಿತ ಮಾಡಲಾಗಿದೆ (.)
2. ನೀಡಿರುವ ಗುರಿಯನ್ನು (30-9-91) ಸಾಧಿಸದಿರುವುದು.
3. ನಿಗದಿತ ಹಣಕ್ಕಿಂತ ಹೆಚ್ಚು ಆಡಳಿತ ವೆಚ್ಚ ಭರಿಸಿರುವುದು.
4. ಹೆಚ್ಚಿನ ಆರಂಭ ಶಿಲ್ಕು.

ದಸರಾ ಕ್ರೀಡಾ ಮತ್ತು ಕನ್ನಡ ರಾಜ್ಯೋತ್ಸವದ ಪ್ರಶಸ್ತಿಗಳು

1123 (1896) ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಸರ್ಕಾರದವರು ಪ್ರತಿವರ್ಷ ದಸರಾ ಕ್ರೀಡಾ ಪ್ರಶಸ್ತಿ ಹಾಗೂ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗಳನ್ನು ನೀಡುತ್ತಿರುವುದು ನಿಜವೇ?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) :

1. ಹೌದು.

ಮಲಪ್ರಭಾ ನದಿಗೆ ಬ್ಯಾರೇಜ ಕಟ್ಟುವ ಬಗ್ಗೆ

1127 (1901) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಕಾದ್ರೊಳ್ಳಿ ಗ್ರಾಮದ ಹತ್ತಿರ ಮಲಪ್ರಭಾ ನದಿಗೆ ಬಾಂದಾರ ಕಟ್ಟುವ ಸಲುವಾಗಿ ಕಾರ್ಯಕಾರಿ ಅಭಿಯಂತರರು. ಚಿಕ್ಕ ನೀರಾವರಿ ಇಲಾಖೆ. ಬೆಳಗಾವಿ ಇವರು ನಕ್ಷೆ ಹಾಗೂ ಅಂದಾಜು ವೆಚ್ಚ

ಪತ್ರಿಕೆಯನ್ನು ತಯಾರು ಮಾಡಿ ಸರ್ಕಾರದ ಅನುಮತಿಗಾಗಿ ಮುಖ್ಯ ಇಂಜಿನಿಯರ್, ನೀರಾವರಿ ಇಲಾಖೆ, ಬೆಂಗಳೂರು ಇವರಿಗೆ ಎಂದು ಒಪ್ಪಿಗೆಗೆ ಕಳುಹಿಸಲಾಗಿದೆ?

ಅ) ಬಾಂದಾರ ಕಟ್ಟುವುದರಿಂದ ಎಷ್ಟು ಎಕರೆ ಜಮೀನಿಗೆ ನೀರನ್ನು ಒದಗಿಸಲಾಗುವುದು ಮತ್ತು ಯಾವ ಯಾವ ಗ್ರಾಮದ ಜನರಿಗೆ ಇದರಿಂದ ಉಪಯೋಗವಾಗುವುದು ಹಾಗೂ ಇದಕ್ಕೆ ಎಷ್ಟು ಹಣ ಬೇಕಾಗುವುದು;

ಇ) ಇಲ್ಲಿ ಕೂಡಲೇ ಬಾಂದಾರ ಕಟ್ಟಲು ಸರ್ಕಾರದವರು ಯಾವ ಕ್ರಮ ಕೈಗೊಳ್ಳುವರು ಮತ್ತು ಇನ್ನು ಎಷ್ಟು ದಿವಸಗಳಲ್ಲಿ ಈ ಕೆಲಸಕ್ಕೆ ಮಂಜೂರಾತಿ ನೀಡಿ ಕೆಲಸವನ್ನು ಪ್ರಾರಂಭಿಸಲಾಗುವುದು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು) :

ಅ) ಅಂದಾಜು ಪತ್ರಿಕೆ ಮತ್ತು ನಕ್ಷೆ ಕಳುಹಿಸಿರುವುದಿಲ್ಲ. ಆದರೆ ಪೂರ್ವಾನ್ವೇಷಣಾ ವರದಿಯನ್ನು ದಿನಾಂಕ 26-11-91ರಂದು ಸಣ್ಣ ನೀರಾವರಿ ಮುಖ್ಯ ಇಂಜಿನಿಯರ್‌ರವರಿಗೆ ಕಳುಹಿಸಿದ್ದಾರೆ.

ಆ) ಈ ಬಾಂದಾರದಿಂದ ಸುಮಾರು 500 ಎಕರೆ ಜಮೀನಿಗೆ ನೀರಾವರಿ ಒದಗಿಸಬಹುದಾಗಿದೆ. ಈ ಯೋಜನೆಯಿಂದ ಕಾದ್ರೊಳ್ಳಿ ಮತ್ತು ಎಂ.ಕೆ. ಹುಬ್ಬಳ್ಳಿ ಗ್ರಾಮದ ಜನರಿಗೆ ಉಪಯೋಗವಾಗುವುದು. ಈ ಯೋಜನೆಗೆ ಸುಮಾರು 65.00 ಲಕ್ಷ ರೂ.ಗಳು ಬೇಕಾಗಬಹುದು.

ಇ) ಈ ಯೋಜನೆ ಬಗ್ಗೆ ವಿವರವಾದ ತನಿಖೆ ನಡೆಸಿ ಅಂದಾಜು ಪತ್ರಿಕೆಯನ್ನು ತಯಾರಿಸಿ ಕಾಮಗಾರಿಯು ಶಕ್ಯವೆಂದು ಕಂಡುಬಂದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಚಿಮಕೋಡಿ ಗ್ರಾಮದ ಹತ್ತಿರ ಏತ ನೀರಾವರಿ ಕಾಮಗಾರಿ

1130 (1906) ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ತಾಲ್ಲೂಕಿನ ಚಿಮಕೋಡಿ ಗ್ರಾಮದ ಹತ್ತಿರ ಒಂದು ಏತ ನೀರಾವರಿ ಕಾಮಗಾರಿಯು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಇದು ಕಾರ್ಯ ನಿರ್ವಹಿಸುತ್ತಿದೆಯೆ? ಅಥವಾ ಇಲ್ಲವೇ?

ಇ) ಇಲ್ಲದಿದ್ದಲ್ಲಿ ಈ ಯೋಜನೆಯು ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಮಾಡಲು ಸರ್ಕಾರವು ಯಾವುದಾದರೂ ಕ್ರಮವನ್ನು ಕೈಗೊಳ್ಳಲು ಯೋಜಿಸಿದೆಯೇ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಬಂದಿದೆ.

ಆ) ಇದು ಕಾರ್ಯ ನಿರ್ವಹಿಸುತ್ತಿದೆ ಆದರೆ ದೀರ್ಘಕಾಲ ಬಳಕೆಯಲ್ಲಿದ್ದು ಪಂಪುಗಳ ಕಾರ್ಯದಕ್ಷತೆ ಕುಂಠಿತಗೊಂಡಿದೆ ಮತ್ತು 243 ಹೆಕ್ಟೇರ್ ಅಚ್ಚುಕಟ್ಟಿನ ಪೈಕಿ 100 ಹೆಕ್ಟೇರ್ ನೀರಾವರಿ ಆಗುತ್ತಿದೆ.